**ದಿನಾಂಕ 02.06.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು :- ಶ್ರೀ ಆರ್ ಕೆ. ವಾದಿ ಪರ ವಕೀಲರಿಂದಃ-**

ನಾನು ಈ ಪ್ರಕರಣದ ಬಗ್ಗೆ ತಿಳಿದುಕೊಂಡಿರುತ್ತೇನೆ. ದಾವಾ ಆಸ್ತಿಯ ವಿಸ್ತೀರ್ಣ 1 ಎಕರೆ 10 ಗುಂಟೆ ಎಂದರೆ ಸರಿ. 1 ಎಕರೆ 10 ಗುಂಟೆ ಪೈಕಿ 30 ಗುಂಟೆ ಜಮೀನನ್ನು ನನ್ನ ತಂದೆ ಪ್ರತಿವಾದಿ ನಂ.1 ರವರ ಗಂಡ ಹಾಗೂ ಅವರ ಮಾವ ರವರಿಂದ ನೊಂದಾಯಿತ ಕ್ರಯ ಪತ್ರದ ಮೂಲಕ ಖರೀದಿಸಿರುತ್ತಾರೆ ಎಂದರೆ ಸರಿ. ವಾದಿ ನಂ.2 ಮತ್ತು 3 1 ನೇ ವಾದಿಯ ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ವಾದಿಯ ಗಂಡ ಮಹದೇವ ಮತ್ತು ವಾದಿಯ ಮಾವ ಹಳೆ ಕೆಂಪಯ್ಯನ ಹುಂಡಿ ಗ್ರಾಮದವರು ಎಂದರೆ ಇರಬಹುದು. ನಮ್ಮ ಊರು ಮತ್ತು ಹಳೆ ಕೆಂಪಯ್ಯ ಹುಂಡಿ ಅಕ್ಕಪಕ್ಕದ ಊರುಗಳು ಎಂದರೆ ಸರಿ. ನನಗೆ ಹಳೆ ಮಾರಾಟಗಾರರ ಕುಟುಂಬದ ಪರಿಚಯವಿರುವುದಿಲ್ಲ. ನನ್ನ ತಂದೆ 30 ಗುಂಟೆ ಜಮೀನು ಖರೀದಿಸುವಾಗ ನಾನು ಅಲ್ಪಮಹಿ ಎಂದರೆ ಸರಿ. ನನ್ನ ತಂದೆ ಖರೀದಿಸಿದ 30 ಗುಂಟೆ ಹೊರತು ಪಡಿಸಿ ವಾದಿ ಕುಟುಂಬದ ಇತರ ಜಮೀನುಗಳ ಮೇಲೆ ಹಾಗೂ ದಾವಾ ಆಸ್ತಿಯ ಅದೇ ಸರ್ವೆ ನಂಬರ್ ನ ಉಳಿದ ಜಮೀನಿನ ಮೇಲೆ ನಮಗೆ ಯಾವುದೇ ಅಧಿಕಾರ ಇರುವುದಿಲ್ಲ. ಕ್ರಯ ಪತ್ರದಲ್ಲಿ 1 ಎಕರೆ 10 ಗುಂಟೆ ಪೈಕಿ 30 ಗುಂಟೆ ಮಾರಾಟದ ಜಮೀನು ಇದೆ ಎಂದರೆ ಸರಿ. 30 ಗುಂಟೆ ಜಮೀನಿನ ಚೆಕು ಬಂದಿ ಪೂರ್ವಕ್ಕೆ ನಮ್ಮ ಜಮೀನು, ಪಶ್ಚಿಮಕ್ಕೆ ನಾಗರಾಜು ರಾಚೇಗೌಡ ಮತ್ತು ಮಾಹದೇವ ರವರ ಜಮೀನು, ಉತ್ತರಕ್ಕೆ ಮರೀಗೌಡರ ಜಮೀನು, ದಕ್ಷಿಣಕ್ಕೆ ಸುಬ್ಬೆಗೌಡರ ಜಮೀನು

ಎಂದರೆ ಸರಿ. ಈ ಮೇಲೆ ಹೇಳಿದ ಚೆಕು ಬಂದಿ ನಡುವಿನ ಜಮೀನನ್ನು ನನ್ನ ತಂದೆ ಖರೀದಿಸಿದ್ದರು ಎಂದರೆ ಸರಿ. 30 ಗುಂಟೆ ಹೊರತು ಪಡಿಸಿ ಉಳಿದ ಜಮೀನಕ್ಕೆ ಚೆಕು ಬಂದಿ ಪೂರ್ವಕ್ಕೆ ಹೊಟ್ಟೆ ಮಾದಶೆಟ್ಟಿ ಜಮೀನು, ಪಶ್ಚಿಮಕ್ಕೆ ರಾಚಯ್ಯ ಮತ್ತು ಇತರರ ಜಮೀನು, ಉತ್ತರಕ್ಕೆ ಮೇನ್ ರೋಡ್, ದಕ್ಷಿಣಕ್ಕೆ ಖಾಸಗಿ ಜಮೀನು ಎಂದರೆ ಸರಿ. ಈ ಚೆಕು ಬಂದಿಯ ನಡುವಿನ ಜಮೀನಿನಲ್ಲಿ ನಮಗೆ ಯಾವುದೇ ಹಕ್ಕು ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ಸಂಬಂದಿಸಿದಂತೆ ನಮ್ಮ ಮತ್ತು ವಾದಿಯರ ನಡುವೆ 2015 ರಲ್ಲಿ ತಕರಾರು ಪ್ರಾರಂಭ ವಾಯಿತು ಎಂದರೆ ಸರಿ. ನನ್ನ ತಂದೆ ಖರೀದಿಸಿದ 30 ಗುಂಟೆ ಜಮೀನಿನ ಬದಲಾಗಿ ಹೆಚ್ಚುವರಿಯಾಗಿ 1 ಗುಂಟೆ ಸೇರಿಸಿ ಹಕ್ಕು ದಾಖಲೆ ಮಾಡಿಸಿಕೊಂಡಿರುತ್ತೇವೆಂದರೆ ಸರಿಯಲ್ಲ. ಈ ಸಂಬಂದ ವಾದಿಯರು ಮೈಸೂರಿನ ಪ್ರಾಂತ ಕಚೇರಿಯಲ್ಲಿ ಪ್ರಕರಣ ದಾಖಲಿಸಿದ್ದರು ಎಂದರೆ ಸರಿ. ಪ್ರಾಂತ ಕಚೇರಿಯಲ್ಲಿ ಸಿವಿಲ್ ನ್ಯಾಯಾಲಯದಲ್ಲಿ ಇತ್ಯರ್ಥ ಪಡಿಸಿಕೊಳ್ಳಿ ಎಂದು ಆದೇಶವಾಯಿತು ಎಂದರೆ ಸರಿ. ವಾದಿ ಸ್ವಾಧಿನದಲ್ಲಿರುವ ಜಮೀನಿನ ಅನುಭೋಗಕ್ಕೆ ವಾದಿಯರಿಗೆ ತೊಂದರೆ ಕೊಟ್ಟಿದ್ದರಿಂದ ಈ ಪ್ರಕರಣ ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ದಿಃ01.08.2019 ರ ವರೆಗೆ ವಾದಿಯರ ಸ್ವಾಧೀನತೆಗೆ ಮತ್ತು ಅನುಭೋಗಕ್ಕೆ ತಕರಾರು ಮಾಡಿರುತ್ತೇವೆಂದರೆ ಸರಿಯಲ್ಲ. ನನ್ನ ತಂದೆ ಖರೀದಿಸಿದ 30 ಗುಂಟೆ ಹೊರತುಪಡಿಸಿ ವಾದಿಯರ ಜಮೀನಿಗೆ ಡಿಕ್ರಿಯಾಗಲು ನನ್ನ ತಕರಾರು ಇರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಕ್ರಯ ಪತ್ರದಲ್ಲಿ 30 ಗುಂಟೆ ಜಮೀನು ಹೊರತು ಪಡಿಸಿ

ಉಳಿದ ಜಮೀನು ವಾದಿಯರದು ಅಂತ ಇರುತ್ತದೆ ಎಂದರೆ ಸಾಕ್ಷಿ ವಾದಿಯರು ತಮ್ಮ ಜಮೀನನ್ನು ಮಾರಿ ಕೊಂಡಿರುತ್ತಾರೆ ಎಂದು ಹೇಳಿರುತ್ತಾರೆ. ಈಗ ನನಗೆ ತೋರಿಸುತ್ತಿರುವ ನಿಪಿ 8 ದಾವಾ ಜಮೀನಿನ ನಕ್ಷೆ ಎಂದರೆ ಸರಿ.

ನಾನು ಅದ್ವೆತ ಓದಿರುತ್ತೇನೆ. ನನಗೆ ಕನ್ನಡ ಭಾಷೆ ಓದಲು ಬರೆಯಲು ಬರುತ್ತದೆ. ನಾನು 1 ಗುಂಟೆ ಜಮೀನನ್ನು 1 ನೇ ಪ್ರತಿವಾದಿ 9 ಗುಂಟೆ ಜಮೀನನ್ನು ಹೆಚ್ಚುವರಿಯಾಗಿ ಮಾಡಿಕೊಂಡಿರುತ್ತೇವೆಂದು ವಾದಿಯರು ಈ ದಾವೆ ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನಮಗೆ ಯಾವುದೇ ರೀತಿ ಹಕ್ಕು ಮತ್ತು ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. 2 ನೇ ವಾದಿ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ರಿಜಿಸ್ಟಾರ್ ಎಂದರೆ ಸರಿ. ವಾದಿಗಳಿಗೆ ನನಗೆ ಮತ್ತು 1 ನೇ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶ ಇರುವುದಿಲ್ಲ ಎಂದರೆ ಸರಿ. ನಾವು ಅನಾವಶ್ಯಕವಾಗಿ ವಾದಿಯರಿಗೆ ತೊಂದರೆ ಕೊಟ್ಟಿರುತ್ತೇವೆ ಎಂದು ದಾವೆ ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)

ಓ ಹೇ ಕೇ ಸರಿ ಇದೆ

**ಹಿರಿಯ ದಿವಾಣಿ ನ್ಯಾಯಾಧೀಶರು,**

**ತಿ.ನರಸೀಪುರ**